# ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ ರವರ ಕಛೇರಿ ನಡವಳಿಗಳು.

ವಿಷಯ: 2009ರ ಲೋಕಸಭಾ ಸಾರ್ವತ್ರಿಕ ಚುನಾವಣೆ- ಪರವಾನಗಿ ಆಧಾರದ ಶಸ್ತ್ರಾಸ್ತ್ರಗಳನ್ನು ಪೋಲೀಸ್ ಠಾಣೆಯಲ್ಲಿ ಡಿಪಾಸಿಟ್ ಮಾಡುವ ಬಗ್ಗೆ.

ಉಲ್ಲೇಖ:-1) ಈ ಕಛೇರಿ ಸಮಸಂಖ್ಯೆ ಆದೇಶ ದಿನಾಂಕ:17/03/2009.

***

**ಪ್ರಸ್ತಾವನೆ:**

ಉಲ್ಲೇಖ(1)ರ ಆದೇಶದಲ್ಲಿ 16-ಹಾಸನ ಲೋಕಸಭಾ ಸಾರ್ವತ್ರಿಕ ಚುನಾವಣೆ-2009 ಪ್ರಕ್ರಿಯೆ ಮುಗಿಯುವವರೆಗೆ ಪರವಾನಗಿ ಆಧಾರದ ಎಲ್ಲಾ ಶಸ್ತ್ರಾಸ್ತ್ರಗಳನ್ನು ವಾಣಿಜ್ಯ ಬ್ಯಾಂಕುಗಳು, ಪೂಜಾ ಸ್ಥಳ, ಸರ್ಕಾರಿ/ಸಹಕಾರಿ ಸಂಸ್ಥೆ ಹೊರತುಪಡಿಸಿ ಸಂಬಂಧಿಸಿದ ವ್ಯಾಪ್ತಿಯ ಪೋಲೀಸ್ ಠಾಣೆಗಳಲ್ಲಿ ಡಿಪಾಸಿಟ್ ಮಾಡುವಂತೆ ಆದೇಶಿಸಲಾಗಿತ್ತು.

ಕೆಲವು ವಾಣಿಜ್ಯ ಬ್ಯಾಂಕುಗಳ ಕರೆನ್ಸಿ ಚೆಸ್ಟ್ ಮತ್ತು ಎಟಿಎಂ ಗಳಲ್ಲಿ ಪರವಾನಗಿ ಪಡೆದು, ಬಂದೂಕು ಹೊಂದಿರುವ ಸೆಕ್ಯುರಿಟಿ ಗಾರ್ಡ್ಸ್/ಏಜೆನ್ಸಿಯವರು ಸುರಕ್ಷತಾ ಕಾರ್ಯ ನಿರ್ವಹಿಸುತ್ತಿರುವುದರಿಂದ ಅಂತಹವರಿಗೆ ವಿನಾಯಿತಿ ನೀಡುವಂತೆ ಅನೇಕ ಪ್ರಸ್ತಾವನೆಗಳು ಬಂದಿರುತ್ತವೆ ಆದುದರಿಂದ ಈ ಕೆಳಕಂಡ ಆದೇಶ.

**ಆದೇಶ ನಂ:ಆಯುಧ 484/2008-2009, ದಿನಾಂಕ:22/04/2009.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ನವೀನ್ ರಾಜ್ ಸಿಂಗ್, ಭಾ.ಆ.ಸೇ., ಜಿಲ್ಲಾ ದಂಡಾಧಿಕಾರಿ, ಹಾಸನ ಜಿಲ್ಲೆ, ಹಾಸನ ಆದ ನಾನು ದಿನಾಂಕ:17/03/2009ರ ಆದೇಶವನ್ನೇ ಮುಂದುವರಿಸಿದಂತೆ ಹೆಚ್ಚುವರಿಯಾಗಿ ಕಂಡಿಕೆ (6)ರಲ್ಲಿ ವಿಸ್ತರಿಸಿ, ವಾಣಿಜ್ಯ ಬ್ಯಾಂಕುಗಳಲ್ಲಿ ಕರೆನ್ಸಿ ಚೆಸ್ಟ್/ಎಟಿಎಂ ಗಳ ಸುರಕ್ಷತೆ ಕಾರ್ಯ ನಿರ್ವಹಿಸುತ್ತಿರುವ ಸೆಕ್ಯುರಿಟಿ ಗಾರ್ಡ್ಸ್/ಏಜೆನ್ಸಿಯವರಿಗೆ ಬ್ಯಾಂಕಿನ ವ್ಯವಸ್ಥಾಪಕರು ನೀಡಿರುವ ದೃಢೀಕರಣ ಪತ್ರ ಆಧರಿಸಿ ಅಂತಹವರಿಗೆ ಡಿಪಾಜಿಟ್ ಮಾಡುವಲ್ಲಿ ವಿನಾಯಿತಿ ನೀಡಿ ಆದೇಶಿಸಿರುತ್ತೇನೆ.

ಈ ಮೇಲ್ಕಂಡ ಆದೇಶವು ದಿನಾಂಕ: 28/05/2009ರ ವರೆಗೆ ಜಾರಿಯಲ್ಲಿರುತ್ತದೆ.

( ನವೀನ್ ರಾಜ್ ಸಿಂಗ್)
ಜಿಲ್ಲಾ ದಂಡಾಧಿಕಾರಿಗಳು,
ಹಾಸನ ಜಿಲ್ಲೆ, ಹಾಸನ.

**ಪ್ರತಿ:**

1. ಪೋಲೀಸ್ ಅಧೀಕ್ಷಕರು, ಹಾಸನ ಜಿಲ್ಲೆ, ಹಾಸನ ರವರಿಗೆ ಕಳುಹಿಸಿ ಜಿಲ್ಲೆಯ ಎಲ್ಲಾ
2. ಠಾಣಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ತಿಳಿಸಿದೆ.
3. ಉಪವಿಭಾಗಾಧಿಕಾರಿಗಳು, ಹಾಸನ / ಸಕಲೇಶಪುರ
4. ಜಿಲ್ಲೆಯ ಎಲ್ಲಾ ಸಹಾಯಕ ಚುನಾವಣಾಧಿಕಾರಿಗಳಿಗೆ
5. ಜಿಲ್ಲೆಯ ಎಲ್ಲಾ ತಹಸೀಲ್ದಾರರಿಗೆ ಮಾಹಿತಿ ಮತ್ತು ಕ್ರಮಕ್ಕಾಗಿ
6. ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಇಲಾಖೆ, ಹಾಸನ ಇವರಿಗೆ ಎಲ್ಲಾ ಪ್ರಚಾರ ಮಾಧ್ಯಮಗಳಲ್ಲಿ ಸುದ್ಧಿಯಾಗಿ ಪ್ರಕಟಿಸುವ ಬಗ್ಗೆ ಕಳುಹಿಸಿದೆ.